| O.S 117/2015 | DW-1 |
|---|---|

ಸಾಕ್ಷಿಗೆ ವಿಧಿಬದ್ಧವಾಗಿ ದಿನಾಂಕ 13.08.2024 ರಂದು ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲು ವಾದಿ ಪರ ವಕೀಲರಾದಃ ಶ್ರೀ CRN ರವರಿಂದ**

ಸರ್ವೆ ನಂಬರ್ 846/2 ರಲ್ಲಿ 7 ಗುಂಟೆ ಮತ್ತು ಸರ್ವೆ ನಂಬರ್ 846/6 ರಲ್ಲಿ 3 ಗುಂಟೆಯ ಸ್ವತ್ತು ನನಗೆ ಗೊತ್ತು ಎಂದರೆ ನಿಜ. ಸದರಿ ಸ್ವತ್ತಿನ ಪೂರ್ವಕ್ಕೆ ಮೊದಲು ಪಟೇಲ್ ಪುಟ್ಟಸೋಮಯ್ಯ ರವರು ಇದ್ದರು ಹಾಗೂ ಈಗ ಅವರ ಮೊಮ್ಮಗ ಡಿ.ಇಷ್ಟಲಿಂಗಮೂರ್ತಿ ರವರು ಇದ್ದಾರೆ ಎಂದರೆ ನಿಜ. ಅದೇ ರೀತಿ ಪಶ್ಚಿಮಕ್ಕೆ 1968 ನೇ ಇಸವಿಯಲ್ಲಿ ಶಿವಪ್ಪ ರವರು ಇದ್ದರು ಹಾಗೂ ಈಗ ಶಿವಪ್ಪ ರವರ ಮಗಳ ಮಗನಾದ ಬಿ.ಮಹದೇವಪ್ಪ ಇದ್ದಾರೆ ಎಂದು ಸೂಚಿಸಿದರೆ ನಿಜ. ಇದೇ ರೀತಿ ಉತ್ತರಕ್ಕೆ ಕೆ.ಸಿ ಪುಟ್ಟನಂಜಪ್ಪ ಇದ್ದರು ಈಗ ಇಷ್ಟಲಿಂಗಮೂರ್ತಿ ರವರೇ ಇದ್ದಾರೆ ಎಂದು ಸೂಚಿಸಿದರೆ ಸಾಕ್ಷಿಯು ಎಂದೂ ಸಹ ಕೆ.ಸಿ ಪುಟ್ಟನಂಜಪ್ಪ ಇರಲಿಲ್ಲ ತಾವು ಇಷ್ಟಲಿಂಗಮೂರ್ತಿಗೆ ಜಮೀನಿನ್ನು ಕೊಟ್ಟ ನಂತರ ಈ ಇಷ್ಟಲಿಂಗಮೂರ್ತಿ ರವರು ಇದ್ದಾರೆ ಎಂದು ನುಡಿದಿರುತ್ತಾರೆ. ಇಷ್ಟಲಿಂಗಮೂರ್ತಿ ರವರ ತಾತನ ಹೆಸರು ಪುಟ್ಟಸೋಮಯ್ಯ. 1968 ರಲ್ಲಿ ದಾವಾ ಆಸ್ತಿಯ ಉತ್ತರಕ್ಕೆ ಕೆ.ಸಿ ಪುಟ್ಟನಂಜಪ್ಪ ರವರು ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಯ ದಕ್ಷಿಣಕ್ಕೆ ಕಾಲುವೆ ಇದೆ ಎಂದರೆ ನಿಜ. ನಾವು ಅಣ್ಣ ತಮ್ಮಂದಿರು ನಮ್ಮ ಕುಟುಂಬದ ಎಲ್ಲಾ ಆಸ್ತಿಗಳನ್ನು ವಿಭಾಗ ಪತ್ರದಂತೆ ವಿಭಾಗ ಮಾಡಿಕೊಂಡಿದ್ದೆವು ಆದರೆ ಸರ್ವೆ ನಂಬರ್ 846/6 ರ 3 ಗುಂಟೆ ಜಮೀನನ್ನು ಮಾತ್ರ ವಿಭಾಗ ಮಾಡಿಕೊಂಡಿರಲಿಲ್ಲ. ಈಗ ಸುಮಾರು 20 ವರ್ಷಗಳ ಹಿಂದೆ ವಿಭಾಗ ಮಾಡಿಕೊಂಡಿರುತ್ತೇವೆ ಆದರೆ ನನಗೆ ಸ್ಪಷ್ಟವಾಗಿ ದಿನಾಂಕ ನೆನಪಿಲ್ಲ. ಯಾವ ಕಾರಣಕ್ಕಾಗಿ ಸರ್ವೆ ನಂಬರ್ 846/6 ರ 3 ಗುಂಟೆ ಜಮೀನನ್ನು ವಿಭಾಗ ಪತ್ರದಲ್ಲಿ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿಯು ತಮ್ಮ ತಂದೆಯವರು ಒಬ್ಬ ಮಗನು ಸದರಿ ಆಸ್ತಿಯಲ್ಲಿ ಮನೆ ಕಟ್ಟಿಕೊಳ್ಳಲಿ ಎಂದು ಹೇಳಿದ್ದರು ಸದರಿ ಆಸ್ತಿಯಲ್ಲಿ ಯಾರು ಮನೆ ಕಟ್ಟಿಕೊಳ್ಳಬೇಕೆಂದು ನಿರ್ಧಾರವಾಗದಿದ್ದ ಕಾರಣ ಸದರಿ ಆಸ್ತಿಯನ್ನು ವಿಭಾಗ ಪತ್ರದಲ್ಲಿ ಸೇರಿಸಿರಲಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯು ಈಗ ಸುಮಾರು 35 ವರ್ಷಗಳ ಹಿಂದೆ ತೀರಿಹೋಗಿರುತ್ತಾರೆ. ನಾವು ವಿಭಾಗ ಮಾಡಿಕೊಳ್ಳುವಾಗ ನಮ್ಮ ತಂದೆ ಬದುಕಿರಲಿಲ್ಲ ಎಂದರೆ ನಿಜ. ನಮ್ಮ ತಂದೆಯು ತಮ್ಮ ಮೈನರ್ ಮಕ್ಕಳುಗಳಾದ ನಮ್ಮನ್ನು ಸೇರಿಸಿ ದಿನಾಂಕ 04.03.1968 ರಂದು ಸರ್ವೆ ನಂಬರ್ 846/6 ರ 3 ಗುಂಟೆ ಜಮೀನನ್ನು ವಾದಿಗೆ ಮಾರಾಟ ಮಾಡಿದ್ದರಿಂದ ಸದರಿ ಆಸ್ತಿಯನ್ನು ನಾವು ವಿಭಾಗ ಪತ್ರದಲ್ಲಿ ಸೇರಿಸಿರುವುದಿಲ್ಲ

ಎಂದರೆ ಸರಿಯಲ್ಲ. ದಿನಾಂಕ 04.03.1968 ರಿಂದ ಸರ್ವೆ ನಂಬರ್ 846/6 ರ 3 ಗುಂಟೆ ಜಮೀನಿಗೂ ನಮ್ಮ ಕುಟುಂಬದವರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ್ 846/6 3 ಗುಂಟೆ ಜಮೀನನ್ನು ನನ್ನ ಹೆಸರಿಗೆ ಖಾತೆ ಮಾಡಿಕೊಳ್ಳುವ ಸಮಯದಲ್ಲಿ ನಾನು ಜಮೀನಿನ ದಾಖಲಾತಿಗಳನ್ನು ಕಂದಾಯ ಅಧಿಕಾರಿಗಳಿಗೆ ಕೊಟ್ಟಿರುತ್ತೇನೆ ಯಾವ ದಾಖಲಾತಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಉತ್ತರಿಸಿರುವುದಿಲ್ಲ. ನಿಪಿ-7 ರಲ್ಲಿ ಕೆಳಗೆ ನಿಂತು ಹುಲ್ಲನ್ನು ಕೊಡುತ್ತಿರುವವರು ವಾದಿ. ಮೇಲೆ ಹುಲ್ಲುನ್ನು ತೆಗೆದುಕೊಳ್ಳುತ್ತಿರುವವರು ಯಾರು ಎಂದು ನನಗೆ ಗೊತ್ತಿಲ್ಲ. ನಿಪಿ-6 ರಲ್ಲಿ ಇರುವ ಒಂದು ಸಹಿಯನ್ನು ಸಾಕ್ಷಿಗೆ ತೋರಿಸಲಾಯಿತು ಸಾಕ್ಷಿಯು ಸದರಿ ಸಹಿಯು ತಮ್ಮದೆ ಎಂದು ಒಪ್ಪಿರುತ್ತಾರೆ ಆದ್ದರಿಂದ ಸದರಿ ಸಹಿಯನ್ನು ನಿಪಿ-6 (ಎ) ಎಂದು ಗುರುತಿಸಲಾಯಿತು. ಸರ್ವೆ ಮಾಡಿ ಹದ್ದುಬಸ್ತು ಗುರುತಿಸಲು ಈ ದಾವೆಯನ್ನು ಹೂಡುವ 1 ತಿಂಗಳ ಹಿಂದೆ ಅಧಿಕಾರಿಗಳು ಬಂದಿದ್ದರು, ನಾನು ಅಂದಿನಿಂದ ಇಲ್ಲಿಯವರೆಗೂ ವಾದಿಯಿಂದ ಸರ್ವೆ ನಂಬರ್ 846/6 ರ 3 ಗುಂಟೆ ಜಮೀನನ್ನು ಸ್ವಾಧೀನ ಪಡೆದುಕೊಳ್ಳಲು ಯಾವುದೇ ಪ್ರಯತ್ನ ಮಾಡಿಲ್ಲ ಎಂದರೆ ಸಾಕ್ಷಿಯು ಸದರಿ ಜಮೀನಿನ ಬಳಿ ಹೋದರೆ ವಾದಿಯ ಗಲಾಟೆಗೆ ಬರುತ್ತಿದ್ದರು ಹಾಗೂ ವಾದಿಯು ತನ್ನ ಹೆಂಡತಿಯನ್ನು ಗಲಾಟೆಗೆ ಕಳುಹಿಸುತ್ತಿದ್ದರು ಹಾಗೂ ದಾವೆಯನ್ನು ವಾದಿಯು ಹಾಕಿದ್ದರಿಂದ ತಾವು ಇನ್ಯಾವುದೇ ಪ್ರಯತ್ನ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯು ಸರ್ವೆ ನಂಬರ್ 846/6 3 ಗುಂಟೆಯಲ್ಲಿ ಕಾನೂನಿನಂತೆ ಸ್ವಾಧೀನದಲ್ಲಿ ಇದ್ದರೂ ಸಹ ನಾನು ಅಕ್ರಮವಾಗಿ ಖಾತೆಯನ್ನು ಮಾಡಿಸಿಕೊಂಡಿರುತ್ತೇನೆ ಎಂದರೆ ಸಾಕ್ಷಿಯು ವಾದಿಯ ಮಗ ಮಂಜು ತಮಗೆ ಖಾತೆಯನ್ನು ಮಾಡಿಸಿಕೊಟ್ಟಿರುವುದಾಗಿ ನುಡಿಯುತ್ತಾರೆ. ವಾದಿಯ ಮಗ ಮಂಜು ನನಗೆ ಖಾತೆಯನ್ನು ಮಾಡಿಸಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನಿನ ಖಾತೆಯು ನನ್ನ ಹೆಸರಿನಲ್ಲಿ ಇದ್ದರೂ ಸಹ ಕಾನೂನಿನಂತೆ ವಾದಿಯ ಮನೆಯವರೆ ಸದರಿ ಜಮೀನಿನಲ್ಲಿ ಕಾನೂನಿನಂತೆ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಿಪಿ-7 ರಲ್ಲಿ ಕಾಣಿಸುತ್ತಿರುವ ಹುಲ್ಲಿನ ಮೆದೆಯ ದಕ್ಷಿಣಕ್ಕೆ ಕಾಲುವೆ ಇರುತ್ತದೆ ಹಾಗೂ ಕಾಲುವೆಯ ದಕ್ಷಿಣಕ್ಕೆ ಡಾಂಬರು ರಸ್ತೆ ಇರುತ್ತದೆ ಎಂದರೆ ನಿಜ. ಸರ್ವೆ ನಂಬರ್ 846/6 ರಲ್ಲಿ ನಾನು ಹುಲ್ಲಿನ ಮೆದೆಯನ್ನು ಹಾಕಿರುತ್ತೇನೆ ಎಂದು ತೋರಿಸಲು ನ್ಯಾಯಾಲಯಕ್ಕೆ ಛಾಯ ಚಿತ್ರವನ್ನು ಹಾಜರುಪಡಿಸಿರಬಹುದು ಆದರೆ ಈಗ ನನಗೆ ನೆನಪಿಲ್ಲ. 1968ನೇ ಇಸವಿಯಿಂದಲೂ ನಾನಾಗಲೀ ಅಥವಾ ನನ್ನ ತಂದೆಯಾಗಲಿ ಸರ್ವೆ ನಂಬರ್ 846/6 3 ಗುಂಟೆ ಜಮೀನಿನಲ್ಲಿ ಸ್ವಾಧೀನದಲ್ಲಿ ಇಲ್ಲಾ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು ತಾವು ಇದ್ದಿಲ್ಲದ ಸಮಯದಲ್ಲಿ ವಾದಿಯು ನಿಪಿ-**7** ರಲ್ಲಿ ಕಾಣಿಸುವಂತಹ ನಾವು ಹಾಕಿರುವಂತಹ ಹುಲ್ಲಿನ ಮೆದೆಯ ಬಳಿ ಛಾಯ ಚಿತ್ರವನ್ನು ತೆಗೆಸಿಕೊಂಡಿರಬಹುದು

| O.S 117/2015 | DW-1 |
|---|---|

ಎಂದು ನುಡಿದಿರುತ್ತಾರೆ. ಸುಮಾರು 30–40 ವರ್ಷಗಳಿಂದಲೂ ನಾವು ಸರ್ವೆ ನಂಬರ್ 846/6 ರಲ್ಲಿ ಹುಲ್ಲಿನ ಮೆದೆಯನ್ನು ಹಾಕುತ್ತಾ ಬಂದಿರುತ್ತೇವೆ. ನನಗೆ ಹುಲ್ಲಿನ ಮೆದೆಯ ಛಾಯಚಿತ್ರವನ್ನು ಇಲ್ಲಿಯವರೆಗೂ ನ್ಯಾಯಾಲಯಕ್ಕೆ ನೀಡಲು ಯಾವುದೇ ತೊಂದರೆ ಇರಲಿಲ್ಲ. ನಿಪಿ–7 ರಲ್ಲಿ ಕಾಣಿಸುತ್ತಿರುವ ಹುಲ್ಲಿನ ಮೆದೆಯನ್ನು ವಾದಿಯು ಹಾಕಿಸಿರುವುದು ಎಂದರೆ ಸರಿಯಲ್ಲ. ಸರ್ವೆ ನಂಬರ್ 846/2 ಮತ್ತು 846/6 ಕ್ಕೆ ಹೋಗಬೇಕಾದರೆ ನಿಪಿ–7 ರಲ್ಲಿ ಕಾಣಿಸುತ್ತಿರುವ ಡಾಂಬರು ರಸ್ತೆಯನ್ನು ಹೊರತು ಪಡಿಸಿ ಯಾವುದೇ ಜಾಗ ಇಲ್ಲಾ ಎಂದರೆ ಸಾಕ್ಷಿಯು ಸರ್ವೆ ನಂಬರ್ 846/6 ಕ್ಕೂ ಮತ್ತು ಡಾಂಬರು ರಸ್ತೆಗು ಮಧ್ಯ ಇರುವ ಚಾನಲ್ ಇಳಿದು ಬರಬಹುದು ಅಥವಾ ಸೇತುವೆ ಮಾಡಿಕೊಂಡು ಬರಬಹುದು ಎಂದು ನುಡಿಯುರುತ್ತಾರೆ. ವಾದಿಯು 1968ನೇ ಸಾಲಿನಲ್ಲಿ ಹಿತ್ತಲು ಮಾಡಿಕೊಳ್ಳಲು ಮತ್ತು ಮನೆ ಕಟ್ಟಲು ಸರ್ವೆ ನಂಬರ್ 846/6 3 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ನಿಜ. ನನಗೆ ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕಾಗಲಿ ಅಥವಾ ಅಧಿಕಾರ ಇಲ್ಲದೇ ಇದ್ದರೂ ಸಹ ನಾನು ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 04.03.1968 ರಲ್ಲಿ ನಮ್ಮ ತಂದೆಯು ಕ್ರಯ ಪತ್ರದಲ್ಲಿ ಸರ್ವೆ ನಂಬರ್ 846/2 ರಲ್ಲಿ 7 ಗುಂಟೆ ಜಮೀನು ಮತ್ತು ಸರ್ವೆ ನಂಬರ್ 846/6 ರಲ್ಲಿ 3 ಗುಂಟೆ ಜಮೀನು ಎಂದು ಬರೆಯುವುದನ್ನು ಬಿಟ್ಟು ತಪ್ಪಾಗಿ ಸರ್ವೆ ನಂಬರ್ 846/2 ರಲ್ಲಿ 10 ಗುಂಟೆ ಜಮೀನು ಎಂದು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಆದರೆ ಸದರಿ ಕ್ರಯ ಪತ್ರದಲ್ಲಿ ಚೆಕ್ಕುಬಂದಿ ಸರಿಯಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾನು ಎಂದಿಗೂ ಸ್ವಾಧೀನದಲ್ಲಿ ಇಲ್ಲಾ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

13.08.2024

ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ.ದ ನ್ಯಾಯಾಲಯ ಯಳಂದೂರು.